ದಾರಿಹೋಕ: ಮಗೂ ಯಾಕೆ ಅಳುತ್ತಿರುವೆ?
ಮಗು: ಹಸು ಮೇಯುತ್ತಾ ಮೇಯುತ್ತಾ ಮರಳಿ ನಮ್ಮ ಮನೆಗೆ ಹೋಗಿದೆ.
ದಾರಿಹೋಕ: ಅಷ್ಟೇ ತಾನೆ? ನೀನ್ಯಾಕೆ ಅಳಬೇಕು?
ಮಗು: ನಮ್ಮ ಮನೆಗೆ ಹೋಗುವ ದಾರಿ ಹಸುವಿಗೆ ಮಾತ್ರ ಗೊತ್ತು. ನಾನೀಗ ಹೇಗೆ ಹೋಗಲಿ!

★★★



ಹೆಂಡತಿ: ರೀ! ಸಂಜೆ ಬೇಗ ಮನೆಗೆ ಬನ್ನಿ ಸಿನಿಮಾಗೆ ಹೋಗೋಣ!
ಗಂಡ: ಬೇಗ ಬರಲ್ಲ ಅಂದ್ರೆ ಏನ್ಮಾಡ್ತೀಯಾ?
ಹೆಂಡತಿ: ನೋಡಿ ಬೇಗ ಬಂದ್ರೆ ಬಿಜೆಪಿ ಪಕ್ಷದ ಚಿಹ್ನೆಯಿಂದ ಸ್ವಾಗತಿಸುತ್ತೇನೆ. ಲೇಟಾಗಿ ಬಂದ್ರೆ ಕಾಂಗ್ರೆಸ್ ಪಕ್ಷದ ಚಿಹ್ನೆಯಿಂದ ಸ್ವಾಗತಿಸುತ್ತೇನೆ. ತುಂಬಾ ಲೇಟಾಗಿ ಬಂದ್ರೆ ಅಮ್ ಆದ್ಮಿ ಪಕ್ಷದ ಚಿಹ್ನೆಯಿಂದ ಸ್ವಾಗತಿಸುತ್ತೇನೆ. ಆಯ್ಕೆ ನಿಮ್ಮದು.

★★★

ಗುಂಡ ತರಕಾರಿ ಕೊಳ್ಳಲು ಹೋದಾಗ ತರಕಾರಿ ಅಂಗಡಿಯಾತ ಅವುಗಳ ಮೇಲೆ ನೀರು ಸಿಂಪಡಿಸುತ್ತಿದ್ದ.
ತುಂಬಾ ಹೊತ್ತಾದರೂ ತನ್ನನ್ನು ಗಮನಿಸಿದ ಕಾರಣ ಗುಂಡ ಎಚ್ಚರಿಸಿದ 'ತರಕಾರಿ, ಕಾಯಿ ಪಲ್ಲೆಗಳಿಗೆ ಪ್ರಜ್ಞೆ ಬಂದಿದ್ದರೆ ನನಗೊಂದು ಕಿಲೋ ಬೆಂಡೆಕಾಯಿ ಕೊಡು ಮಾರಾಯ!'

★★★

ಉಂಡಾಡಿ ಗುಂಡನ ಗಣಿತ ಜ್ಞಾನವನ್ನು ಅಪ್ಪ ಪರೀಕ್ಷಿಸುತ್ತಿದ್ದ.
ಅಪ್ಪ: 5ರ ನಂತರ ಏನು ಬರುತ್ತದೆ ಗುಂಡ?
ಗುಂಡ: 6, 7
ಅಪ್ಪ: ಒಳ್ಳೆಯದು. ಅದರ ನಂತರ?
ಗುಂಡ: 8,9,10
ಅಪ್ಪ: ತುಂಬಾ ಒಳ್ಳೆಯದು. ಅದರ ನಂತರ?
ಗುಂಡ: ಗುಲಾಮ, ರಾಣಿ, ರಾಜ..!

★★★

ಮದುವೆ ಅನ್ನೋದು ಕೆಎಸ್‌ಆರ್‌ಟಿಸಿ ಬಸ್ ಇದ್ದ ಹಾಗೆ! ತುಂಬ ಕಾದು ಯಾವುದೇ ಬಸ್ ಬರಲಿಲ್ಲ ಅಂತ ಕೆಂಪು ಬಸ್ ಹತ್ತುತ್ತೀವಿ.
ಟಿಕೆಟ್ ತಗೊಂಡು ತಿರುಗಿ ನೋಡಿದ್ರೆ ರಾಜಹಂಸ, ಐರಾವತ ಎಲ್ಲಾ ಬರುತ್ತಾ ಇರುತ್ತೆ.

★★★





ಪತ್ನಿ: ಮದುವೆಗೆ ಮೊದಲು ನೀವು ದಿನಾ ದೇವಸ್ಥಾನಕ್ಕೆ ಹೋಗುತ್ತಿದ್ದಿರಂತೆ ಈಗೇನಾಯಿತು?
ಪತಿ: ಹೌದು, ಆದರೆ ನಿನ್ನನ್ನು ಮದುವೆಯಾದಂದಿನಿಂದ ನಾನು ದೇವರ ಮೇಲಿನ ಭರವಸೆಯನ್ನೇ ಕಳೆದುಕೊಂಡಿದ್ದೇನೆ.

★★★

ನ್ಯಾಯಾಧೀಶ: ನೀನು ಹಾಲಿನಲ್ಲಿ ನಿರ್ಮಾ ಪೌಡರ್ ಬೆರೆಸಿ ಮಾರುತ್ತಿರುವುದು ನಿಜವೇ?
ಹಾಲಿನವನು: ನಿಜ ಮೈ ಲಾರ್ಡ್.
ನ್ಯಾಯಾಧೀಶ: ಇದು ತಪ್ಪು ಎಂದು ನಿನಗೆ ಗೊತ್ತಿಲ್ಲವೆ? ಈ ತಪ್ಪಿಗಾಗಿ ನಿನಗೆ ಸಜೆಯಾಗಬಹುದು.
ಹಾಲಿನವನು: ಸಜೆ ಏಕೆ? ನೀವು ಟಿ.ವಿ. ನೋಡುವುದಿಲ್ಲವೆ? 'ಹಾಲಿನಂತಹ ಬಿಳುಪು ನಿರ್ಮಾದಿಂದ ಬಂತು' ಎಂಬ ಜಾಹೀರಾತನ್ನು ನೀವು ನೋಡಿರಬೇಕಲ್ಲ?

★★★

ಧ್ವನಿಗಿಂತ ಬೆಳಕು ವೇಗವಾಗಿ ಚಲಿಸುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೀಡಿ ಎಂದು ವಿಜ್ಞಾನದ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಶ್ನಿಸಿದರು.
ಆಗ ಗುಂಡ ಎದ್ದು ನಿಂತು: 'ನಮ್ಮ ಮನೆಯ ಟಿವಿ ಸಾರ್' ಎಂದ.
'ಅದು ಹೇಗೆ?' ವಿಜ್ಞಾನದ ಶಿಕ್ಷಕರು ಪ್ರಶ್ನಿಸಿದರು.
'ಏಕೆಂದರೆ ನಮ್ಮ ಮನೆಯ ಟಿವಿಯಲ್ಲಿ ಚಿತ್ರ ಕಾಣಿಸಿಕೊಂಡ ಎಷ್ಟೋ ಹೊತ್ತಿನ ನಂತರ ಧ್ವನಿ ಕೇಳಿಸುತ್ತದೆ' ಎಂದ ಗುಂಡ.

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**

ಗುಂಡ: ಒಂದು ಬಾಳೆ ಹಣ್ಣಿನ ಕ್ರಯವೆಷ್ಟು?
ಅಂಗಡಿಯಾತ: 10 ರೂಪಾಯಿ
ಗುಂಡ: 4 ರೂಪಾಯಿಗೆ ಕೊಡುವೆಯಾ?
ಅಂಗಡಿಯಾತ: 4 ರೂಪಾಯಿಗೆ ಅದರ ಸಿಪ್ಪೆ ಕೊಡುತ್ತೇನೆ.
ಗುಂಡ: 6ರೂಪಾಯಿ ತಗೋ, ಸಿಪ್ಪೆ ನೀನೇ ಇಟ್ಟುಕೊಂಡು ಹಣ್ಣು ಕೊಡು.

★★★

ಗುಂಡನ ಅನುಭವದ ಪ್ರಕಾರ ಏನಾದರೂ ಸಾಧನೆ ಮಾಡುವುದಿದ್ದರೆ ಮದುವೆಗಿಂತ ಮೊದಲೇ ಮಾಡಬೇಕು.
ಇಲ್ಲದಿದ್ದರೆ ಜನರು ಅದನ್ನು ಹೆಂಡತಿಯ ಕಾಲ್ಗುಣ ಎಂದು ಹೇಳುತ್ತಾರೆ.

★★★

ಐವತ್ತನೇ ವಿವಾಹ ವಾರ್ಷಿಕೋತ್ಸವದಂದು ಗಂಡನ ಕಣ್ಣಲ್ಲಿ ಎರಡು ಹನಿ ಕಣ್ಣೀರು ನೋಡಿದ ಹೆಂಡತಿ:
'ನೀವು ಇಷ್ಟು ಭಾವುಕರು ಎಂದು ಗೊತ್ತಿರಲಿಲ್ಲ ಕಣ್ರೀ' ಎಂದಳು.
ಗಂಡ: 50 ವರ್ಷಗಳ ಹಿಂದೆ ನಾವು ಕೋಣೆಯಲ್ಲಿ ಸಿಕ್ಕಿ ಹಾಕಿಕೊಂಡಾಗ ನಿಮ್ಮಪ್ಪ ಲಗ್ನ ಆಗ್ತೀಯಾ ಇಲ್ಲಾ ಐವತ್ತು ವರ್ಷ ಜೈಲಿಗೆ ಹಾಕ್ಲಾ ಎಂದು ಕೇಳಿದ್ದರು. ಜೈಲಿಗೆ ಹೋಗಿದ್ರೆ ಇಂದು ಬಿಡುಗಡೆ ಆಗ್ತಿತ್ತು ಎಂದು ನೆನಪಿಸಿಕೊಂಡು ಕಣ್ಣೀರು ಬಂತು.

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ, ಹರಿಹರ**